ಪೂಜಾರ್ತಿ ಎದುರುತ್ತರ ಕೊಡದೆ ಕಣ್ಣು ಮುಚ್ಚಿದ್ದರೂ ಅವರ ಮಸ್ಕಿರಿ ರಾತ್ರಿ ಊಟ ಮಾಡುವ ವರೆಗೂ ಮುಂದುವರಿದೇ ಇತ್ತು.

ಗೇಟು ಮತ್ತೊಮ್ಮೆ "ಕಿರ್ರ್" ಎಂದಾಗ ಅಕ್ಕು ಪೂಜಾರ್ತಿ ಈಸಿಚೇರಿನಲ್ಲಿ ಬೆನ್ನು ನೇರ್ಪಾಗಿಸಿ ಕಣ್ಣು ಚೂಪು ಮಾಡಿದಳು. ಕಪ್ಪು ಕೊಡೆಯ ಹಿನ್ನಲೆಯಲ್ಲಿ ಬೆಳ್ಳನೆ ಬಿಳಿ ಆಕೃತಿಯೊಂದು ಗಾಳಿಗೆ ತೇಲುವಂತೆ ಅಂಗಳದಲ್ಲಿ ಹೆಜ್ಜೆಯಿಟ್ಟಿತು. ರೋಕಿಗೆ ನಿದ್ದೆ ಹತ್ತಿರಬೇಕು. ಗೇಟು ತೆರೆದದ್ದು ಗೊತ್ತಾಗಿಲ್ಲ. "ಯಾರಿದು?" ಅಕ್ಕು ಪೂಜಾರ್ತಿಯ ಅರೆಮಂಪರಿನ ಕಣ್ಣುಗಳು ಗೊಂದಲದ ಗೂಡಾದವು. ಅಂಗಳದಿಂದ ಸಿಟೌಟ್ ಹತ್ತಿದ ಆಕೃತಿ, "ನಮಸ್ಕಾರ ಪೂಜಾರ್ತಿಗೆ" ಅನ್ನುತ್ತಾ ಕೊಡೆ ಮಡಚಿ ಕಂಕುಳಲ್ಲಿರಿಸಿ ಕೈ ಜೋಡಿಸಿತು. ಸರಿ ಸುಮಾರು ಮೂವತ್ತೈದು ವರ್ಷಗಳ ಹಿಂದೆ ಕೇಳಿದ ಸ್ವರ ಎಡ್ಡಿ ಸೋಜರ ಆಡಿನ "ಮ್ಮೇ" ಎಂಬ ಹಿಮ್ಮೇಳದೊಂದಿಗೆ ಮತ್ತೊಮ್ಮೆ ಮಾರ್ದನಿಸಿದಾಗ ಅಕ್ಕು ಪೂಜಾರ್ತಿಯ ದೇಹ ಅವಳರಿವಿಲ್ಲದೆ ಈಸಿಚೇರಿನಿಂದ ಮೇಲೆದ್ದಿತು. "ಕುಳಿತುಕೊಳ್ಳಿ ಮಾಸ್ಟರೆ" ಅವಳ ನಡುಕದ ದನಿಗೆ ಕಾಯುತ್ತಿದ್ದರೋ? ಎಂಬಂತೆ ಮಾಸ್ಟರು ಅಲ್ಲೇ ಬದಿಯಲ್ಲಿದ್ದ ಮರದ ಕುರ್ಚಿಯಲ್ಲಿ ಕುಸಿದರು. ಅಕ್ಕು ಪೂಜಾರ್ತಿಯ ಕಣ್ಣುಗಳು ಅಪನಂಬಿಕೆಯಿಂದ ಆ ಮುಖದ ಸುತ್ತ ಹರಿದಾಡಿದವು. ಬಿಳಿಚಿದ ಮುಖದಲ್ಲಿ ಪೂರ್ತಿಯಾಗಿ ನರೆತ ಗಡ್ಡ, ಮೀಸೆಗಳು, ಅರ್ಧಕ್ಕರ್ಧ ಬೋಳಾದ ನೆತ್ತಿ, ಬತ್ತಿದ ಕೆನ್ನೆ. ಅದರೂ ಇನ್ನೂ ಹೊಳಪನ್ನು ಕಳೆದುಕೊಳ್ಳದ ಅವೇ ಕಣ್ಣುಗಳು! ಅವಳ ಮನಸ್ಸಿನಲ್ಲಿ ಮೂವತ್ತೈದು ವರ್ಷಗಳ ಹಿಂದಿನ ನೆನಪುಗಳು ಸಿನಿಮಾದ ದೃಶ್ಯಗಳಂತೆ ಹಾದುಹೋದವು.

ಬಹುಶಃ ಐಲ ಮೈದಾನದಲ್ಲಿ 'ಕೃಷ್ಣ ಸಂಧಾನ' ನೋಡಿ ಬಂದು ಎರಡು ವಾರ ಕಳೆದಿರಬೇಕು. ಗುತ್ತಿನ ತೋಟದ ಬದಿಯಲ್ಲಿ ಸೊಪ್ಪು ಕಡಿಯುತ್ತಿದ್ದ ಅಕ್ಕುವಿನ ಸೊಂಟವನ್ನು ಅಲ್ಲೇ ಬದಿಯಲ್ಲಿದ್ದ ಮಾಂಕು ಮೆಲ್ಲನೆ ತಿವಿದಿದ್ದಳು. ನಸುಮುನಿಸಿನಿಂದ ತಲೆ ತಿರುಗಿಸಿದವಳ ನೋಟವನ್ನು ಕಣ್ಣ ಸನ್ನೆಯಲ್ಲೇ ತೋಟದ ಬದಿಯ ಕಾಲ್ದಾರಿಯತ್ತ ಸೆಳೆದಿದ್ದಳು ಮಾಂಕು. ಕಾಲ್ದಾರಿಯಲ್ಲಿ ಭವ್ಯಾಕಾರವೊಂದು ದೃಢವಾದ ಹೆಜ್ಜೆಗಳನ್ನಿಡುತ್ತಾ ಹಾದು ಹೋಗುತ್ತಿತ್ತು. ಸಾಕ್ಷಾತ್ 'ಕೃಷ್ಣಸಂಧಾನ'ದ ಶ್ರೀಕೃಷ್ಣ ವೇಷವನ್ನು ಕಳಚಿ ರಂಗದಿಂದ ಕೆಳಗಿಳಿದಿದ್ದಾನೋ? ಎನ್ನುವಂತೆ ಎತ್ತರದ ನಿಲುವು, ನಸುಗೆಂಪಿನ ತುಂಬು ದೇಹ, ಹಣೆಯಿಂದ ಗೊಂಚಲಾಗಿ ಇಳಿದ ಜೊಂಪೆಗೂದಲು. ಮಿಂಚುಗಣ್ಣುಗಳು ಅಚಾನಕ್ ಇವರತ್ತ ಹರಿದಾಗ ಕೆಂಪು ತುಟಿ ಒಂದಿಷ್ಟು ಹೌದೋ, ಅಲ್ಲವೋ ಎಂಬಂತೆ ಬಿರಿದಿತ್ತು. ಚಳಿಗಾಳಿಯೊಂದು ಸೋಕಿದಂತಾಗಿ ನಡುಗಿದ್ದಳು ಅಕ್ಕು. ಆ ವ್ಯಕ್ತಿ ತಿರುವು ದಾಟುವವರೆಗೆ ಇಬ್ಬರ ಕಣ್ಣುಗಳೂ ಅತ್ತಲೇ ಇದ್ದುದನ್ನು ಗಮನಿಸಿದ ಅಂತಕ್ಕ ಹತ್ತಿರ ಬಂದು, "ಯಾರೇ ಅದು?" ಎಂದಿದ್ದರು. "ಶೆಡ್ತಿಗೆ ಗೊತ್ತಾಗಿಲ್ಲವಾ? ಅದೇ ನಮ್ಮ ಮಯ್ಯರ ಅಳಿಯ." "ದೇವಕಿ ಗಂಡನಾ?" ಅಂತಕ್ಕನ ಉದ್ಗಾರದಲ್ಲಿ ಅಪನಂಬಿಕೆಯಿತ್ತು. ಮಯ್ಯರ ಒಬ್ಬಳೇ ಮಗಳು ದೇವಕಿ. ಮಯ್ಯರ ಅಂಗಳದ ಬದಿಯಲ್ಲೇ ಇದ್ದ ಚಾವಡಿಯಲ್ಲಿ ನಡೆಯುತ್ತಿದ್ದ ಮೂರನೇ ಕ್ಲಾಸಿನ ವರೆಗಿದ್ದ ಸಂಸ್ಕೃತ ಶಾಲೆ ಒಂದು ಕಾಲಕ್ಕೆ ಸಜಪೆಯ ಏಕಮೇವ ಶಾಲೆಯಾಗಿತ್ತು. ಅಂತಕ್ಕನೂ, ಅಕ್ಕುವೂ ಎಲ್ಲರೂ ಅದೇ ಶಾಲೆಗೇ ಹೋದವರು. ಸಣ್ಣದರಲ್ಲಿ ಶಾಲೆಗೇ ಹೋಗುವಾಗೆಲ್ಲ ಮನೆಯ ತಿಟ್ಟೆಯಲ್ಲಿ ಕಂಬಕ್ಕೆ ಒರಗಿ ಒಬ್ಬಳೇ ಚಕ್ಕಳ ಬಕ್ಕಳ ಕುಳಿತು ಎತ್ತಲೋ ನೋಡುತ್ತಿದ್ದ ಪೆಚ್ಚುಮೋರೆಯ ದೊಡ್ಡ ಜೀವದ ದೇವಕಿ ಮೊದಮೊದಲೆಲ್ಲಾ ಶಾಲೆಗೆ ಬರುತ್ತಿದ್ದ ಹುಡುಗರಲ್ಲಿ ಕುತೂಹಲ ಹುಟ್ಟಿಸಿದರೂ, ಕ್ರಮೇಣ ಸದಾ ಕುಳಿತೇ ಇರುತ್ತಿದ್ದ, ತಮ್ಮ ಮಾತಿಗೋ, ಬೊಬ್ಬೆಗೋ ಪ್ರತಿಕ್ರಿಯಿಸದ ಆ ಜೀವವೂ ಕಂಬದಂತೆ ಬರಿಯ ಒಂದು ನಿರ್ಜೀವ ವಸ್ತುವೋ ಎಂಬಂತೆ ಹುಡುಗರ ಅಸಡ್ಡೆಗೆ ಪಕ್ಕಾಗುತ್ತಿತ್ತು. ಅಂತಹ ಮಂದ ಬುದ್ಧಿಯ ದೇವಕಿಗೆ ಇಂತಹ ಚೆಲುವ ಗಂಡನಾ? "ಛೇ, ದೇವರಿಗೇ ಕಣ್ಣಿಲ್ಲ ಬಿಡು" ಮೂವರ ಮನಸ್ಸಿನ ಮಾತು ಅಂತಕ್ಕನ ಉದ್ಗಾರದ ರೂಪದಲ್ಲಿ ಹೊರಬಿದ್ದಿತ್ತು.